## ಪಶ್ಚಿಮ ವಲಯ ವ್ಯಾಪ್ತಿಯ, ಮಲ್ಲೇಶ್ವರಂ ಉಪವಿಭಾಗದ ಗಾಯತ್ರಿನಗರ ವಾರ್ಡ್–76ರಲ್ಲಿ ದಿನಾಂಕ: 29–01–2022 ರಂದು ನಡೆದ ವಾರ್ಡ್ ಸಮಿತಿ ಸಭೆಯ

## ಸಭಾ ನಡವಳಿಗಳು.

**ವಾರ್ಡ್ ಸಂಖ್ಯೆ–76 ಗಾಯತ್ರಿನಗರ** **ಸಮಯ ಮಧ್ಯಾಹ್ನ ಘಂಟೆಗೆ**

ದಿನಾಂಕ: 29–01–2022 ರಂದು ವಾರ್ಡ್ ಸಂಖ್ಯೆ: 76ರ ಜನವರಿ ಮಾಹೆಯ ವಾರ್ಡ್ ಸಮಿತಿ ಸಭೆಯು ನಡೆಯಿತು. ಸದರಿ ಸಭೆಯಲ್ಲಿ ವಾರ್ಡ್ ಸಮಿತಿ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಹಾಗೂ ಸಾರ್ವಜನಿಕರು ಭಾಗವಹಿಸಿದ್ದರು. ವಾರ್ಡ್ ಸಂಖ್ಯೆ: 76ರ ಸಹಾಯಕ ಅಭಿಯಂತರರು ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ಸ್ವಾಗತವನ್ನು ಕೋರಿದರು ಹಾಗೂ ಸದಸ್ಯರುಗಳೆಲ್ಲರ ಕಿರು ವಿವರ ತಿಳಿಸಿ, ಮಾಸ್ಕ್ ಧರಿಸಿ ಸಾಮಾಜಿಕ ಅಂತರ ಕಾಯ್ದುಯಕೊಂಡು ಸಭೆ ನಡೆಸಲು ಕೋರಿದರು.

**ಸಭೆಗೆ ಹಾಜರಿದ್ದವರು :**

| | |
|---|---|
| 1 | ಶ್ರೀ ಚಂದ್ರಶೇಖರ್. ಹೆಚ್.ಆರ್, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್–76 ಗಾಯತ್ರಿನಗರ |
| 2 | ಶ್ರೀ ಚಿಕ್ಕಗೂಳಿಗೌಡ.ಜೆ.ಜಿ, ಸಹಾಯಕ ಅಭಿಯಂತರರು, ವಾರ್ಡ್–76 ಗಾಯತ್ರಿನಗರ ಹಾಗೂ ಕಾರ್ಯದರ್ಶಿ |
| 3 | ಶ್ರೀ ಕನಕರಾಜು, ಕಂದಾಯ ಪರಿವೀಕ್ಷಕರು |
| 4 | ಶ್ರೀ ರವಿ, ಮೌಲ್ಯಮಾಪಕರು |
| 5 | ಶ್ರೀಮತಿ ಶಾರದಾ ಬಾಯಿ, |
| 6 | ಡಾ॥ ಅಂಜನಾ, ಆರೋಗ್ಯ ಅಧಿಕಾರಿ |
| 7 | ಶ್ರೀ ಆರ್.ಸಂತೋಷ್, ಕೆಲಸ ಪರಿವೀಕ್ಷಕರು |
| 8 | ಶ್ರೀ ಮಂಜುನಾಥ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 9 | ಶ್ರೀಮತಿ ಕೃಪಾ ಪ್ರಕಾಶ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 10 | ಶ್ರೀ ಸಂತೋಷ್, ವಾರ್ಡ್ ವೆಲ್‌ಫೇರ್ ಕಮಿಟಿ ಸದಸ್ಯರು |
| 11 | ಶ್ರೀ ರಂಗನಾಥ್, ಬೆಸ್ಕಾಂ, ಜೆ.ಇ |
| 12 | ಶ್ರೀ ಸಿದ್ದರಾಜು, ಬಿ.ಡಬ್ಲ್ಯೂಎಸ್ಎಸ್‌ಬಿ |
| 13 | ಶ್ರೀ ಈಶ್ವರ್ ಗೌಡ, ವಾರ್ಡ್ ಅಧ್ಯಕ್ಷ |
| 14 | ಶ್ರೀ ಗೋವಿಂದರಾಜು, ಆರೋಗ್ಯ ಪರಿವೀಕ್ಷಕರು |

ಸದರಿ ಸಭೆಯಲ್ಲಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

- ಶ್ರೀ ಚಂದ್ರಶೇಖರ್.ಹೆಚ್.ಆರ್ ನೋಡಲ್ ಅಧಿಕಾರಿಗಳು ವಾರ್ಡ್–76 ಇವರು ಸಭೆಯನ್ನು ಮುಂದುವರೆಸಲು ಸೂಚಿಸಿದರು.

**ಆರೋಗ್ಯ ಇಲಾಖೆ :**

- ಸಭೆಯಲ್ಲಿ ಹಾಜರಿದ್ದ ಆರೋಗ್ಯಾಧಿಕಾರಿಗಳು 10 ದಿನಗಳಿಂದ 127 +ve ಪ್ರಕರಣಗಳು ಬಂದಿವೆ ಎಂದು ತಿಳಿಸಿದರು. ಕೋವಿಡ್-19ನ ಪ್ರಕರಣಗಳಿಂದ ನೆಗಡಿ, ಕೆಮ್ಮ ಬರುತ್ತಿದ್ದು, ಜನಗಳು ಬೇಗ ಹುಷಾರಾಗುತ್ತಿದ್ದಾರೆಂದು ತಿಳಿಸಿದರು. ಬೇರೆ ತೊಂದರೆಗಳಿದ್ದವರು ಮಾತ್ರ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ ಎಂದು ತಿಳಿಸಿದರು. ಹಾಗೂ Recovery rate ಜಾಸ್ತಿಯಾಗಿದೆ ಎಂದು ಸಭೆಯಲ್ಲಿ ತಿಳಿಸಿದರು. ಸ್ಕೂಲ್‌ನ ವಿದ್ಯಾರ್ಥಿಗಳಿಗೆ ವ್ಯಾಕ್ಸಿನೇಷನ್ ನೀಡಲಾಗಿದೆ ಎಂದು ತಿಳಿಸಿದರು.

**ಆರೋಗ್ಯ ಇಲಾಖೆ (ಘನತ್ಯಾಜ್ಯ):**

- ಪ್ರತಿ ದಿನ ಘನತ್ಯಾಜ್ಯವನ್ನು ಶೇಖರಿಸಲಾಗುತ್ತಿದೆ ಎಂದು ತಿಳಿಸಿದರು. ಹೆಚ್ಚು ಪೌರಕಾರ್ಮಿಕರನ್ನು ನಿಯೋಜಿಸುವ ಬಗ್ಗೆ ಕೇಳಲಾಯಿತು. ಪೌರಕಾರ್ಮಿಕರು 16ನೇ ಬ್ಲಾಕ್‌ಗೆ ಬೇಕಾಗಿದ್ದು, ಬ್ಲಾಕ್‌ನಲ್ಲಿ ಕೆಲಸ ನಿರ್ವಹಿಸಲು ಪೌರಕಾರ್ಮಿಕರ ಅವಶ್ಯಕತೆ ಇದೆ ಎಂದು ತಿಳಿಸಿದರು. Conservancyಗಳಲ್ಲಿ ಕ್ಲೀನ್ ಮಾಡಲು ಪೌರಕಾರ್ಮಿಕರ ಅವಶ್ಯಕತೆ ಎಂದು ತಿಳಿಸಿದರು. ತಳೋ ಗಾಡಿಗಳಲ್ಲಿ Metrol Station ಕೆಳಗೆ ವ್ಯಾಪಾರ ಮಾಡಲಾಗುತ್ತಿದ್ದು ಇದ್ದರಿಂದ ಸಾರ್ವಜನಿಕ ಆಡಚಣೆಯುಂಟಾಗಿರುವುದರಿಂದ ತೆರವುಗೊಳಿಸುವಂತೆ ಸೂಚಿಸಲಾಯಿತು.

**BESCOM ಇಲಾಖೆ:**

- ಶ್ರೀರಾಮಪುರದ Conservancyಯಲ್ಲಿ Tranformerನ್ನು Translate ಮಾಡುವಂತೆ ತಿಳಿಸಿದರು.

**ಮಾರ್ಷಲ್‌ರವರು:**

- ಮಾರ್ಷಲ್‌ಗಳು ಜನಗಳಿಗೆ ಕೋವಿಡ್ ಬಗ್ಗೆ awareness ನೀಡಲಾಗುತ್ತಿದೆ ಎಂದು ತಿಳಿಸಿದರು. ಮಾಸ್ಕ್ ಧರಿಸದವರಿಗೆ (ಹಾಕದವರಿಗೆ) ದಂಡ ವಿಧಿಸಲಾಗುತ್ತಿದೆ ಎಂದು ತಿಳಿಸಿದರು. awareness ಕೊಟ್ಟ ನಂತರ ಸಾರ್ವಜನಿಕರು ಅದನ್ನು ಪಾಲಿಸುವಂತೆ ನೋಡಿಕೊಳ್ಳಲು ತಿಳಿಸಿದರು.

**BWSSB ಇಲಾಖೆ:**

- ಹೊಸದಾಗಿ ಕಾವೇರಿ ಪೈಪ್‌ಗಳನ್ನು ಅಳವಡಿಸಲಾಗುತ್ತಿದೆ ಎಂದು ತಿಳಿಸಿದರು. ಪೈಪ್ ಪೈನ್ ಅಳವಡಿಸಿದ ನಂತರ **Restoration** ಮಾಡುವಂತೆ ತಿಳಿಸಲಾಯಿತು.

**ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಕಾರ್ಯದರ್ಶಿಯವರು ವಂದಾನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.**

**ಕಾರ್ಯದರ್ಶಿ,**
**ಸಹಾಯಕ ಅಭಿಯಂತರರು, ವಾರ್ಡ್-76**
**ಗಾಯತ್ರಿನಗರ, ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**

**ಅಧ್ಯಕ್ಷರು**
**ನೋಡಲ್ ಅಧಿಕಾರಿಗಳು, ವಾರ್ಡ್-76**
**ಮಲ್ಲೇಶ್ವರಂ ಉಪ ವಿಭಾಗ, ಬಿಬಿಎಂಪಿ**